ಶ್ರೀ ಬಿ. ರಾಚಯ್ಯ.—ಕಾಪಿ ಇನ್ನೂ ಬಂದಿಲ್ಲ. ಉತ್ತರ ಕೊಡಿ ಎಂದರೆ ಕೊಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಆದು ಯಾವ ತರಹ ಆಗುತ್ತದೆ. ನಾವು ಕಳುಹಿಸಿದ ಪ್ರಶ್ನೆಗಳೆಲ್ಲಾ ಈ ರೀತಿ ಆಗುತ್ತಿವೆ. ಇನ್ನು ಅಸೆಂಬ್ಲಿ ಅಧಿವೇಶನ ಇರುವುದು ೨–೩ ದಿವಸಗಳು ಮಾತ್ರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೇನು ಉತ್ತರ ಕೊಡುತ್ತಾರೆ ಏನ್ನುವುದನ್ನು ನೆನಪು ಇಟ್ಟುಕೊಳ್ಳುವುದಕ್ಕೆ ನಾವುಗಳು ಕಂಪ್ಯೂಟರ್ ಏನು ?

ಅಧ್ಯಕ್ಷರು.—ರಾಚಯ್ಯನವರೇ ತಾವು ಸೀನಿಯರ್ ಮಿನಿಸ್ಟರ್. ಡಿಪಾರ್ಟ್‌ಮೆಂಟ್‌ನಿಂದ ಉತ್ತರವನ್ನು ನಿನ್ನೆ ತರಿಸಿಬೇಕಾಗಿತ್ತು.

ಶ್ರೀ ಬಿ.ರಾಚಯ್ಯ.—ನಿನ್ನೆ ರಜೆ ಇತ್ತು.

ಅಧ್ಯಕ್ಷರು.—ಮೊನ್ನೆ ತರಿಸಬೇಕಾಗಿತ್ತು.

ಶ್ರೀ ಬಿ. ರಾಚಯ್ಯ.—ಕಾಪಿ ಬಂತು.

ಅಧ್ಯಕ್ಷರು.—ಮೊನ್ನೆ ತಾವು ಉತ್ತರ ತರಿಸಿಕೊಂಡಿದ್ದರೆ ತಾವು ಸಹ ಒಂದು ಸಾರಿ ನೋಡಿ ಓದಿಕೊಂಡು ಉತ್ತರ ಕೊಡಬಹುದು.

ಶ್ರೀ ಬಿ. ರಾಚಯ್ಯ.—ಸರಿ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೋಡಿ ಸರ್ಕಾರ ಹೇಗಿದೆ ?

ಅಧ್ಯಕ್ಷರು.—ನಿಮ್ಮ ಕಾಲದಿಂದಲೂ ಸಹ ಸಿಬ್ಬಂದಿಗೆ ಈ ಅಲರ್ಜಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಕಾಲದಿಂದ ಅಂದರೆ.....

ಅಧ್ಯಕ್ಷರು.—ನಾವು ನೀವು ಮಂತ್ರಿಗಳಾಗಿದ್ದ ಕಾಲದಿಂದಲೂ ಸಿಬ್ಬಂದಿಗೆ ಈ ಅಲರ್ಜಿ ಇದೆ. ಹೋಗಲಿ, ಈಗ ಪ್ರಶ್ನೆಗೆ ಉತ್ತರ ಕೊಡಿ.

ಶಿವಮೊಗ್ಗೆಯಲ್ಲಿ ಕಾಡಾನೆಗಳ ಹಾವಳಿ

೧೭೫೫ (೫೫೪) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಕಾಡಾನೆ ತುಳಿತಕ್ಕೆ ಎಷ್ಟು ಜನ ಬಲಿಯಾಗಿದ್ದಾರೆ ?

ಆ) ಆ ಪೈಕಿ ಎಷ್ಟು ಮಂದಿಗೆ ಪರಿಹಾರ ಕೊಡಲಾಗಿದೆ ?

ಇ) ಹೊಸನಗರ ತಾಲ್ಲೂಕು ಅರಸಾಳಿನಲ್ಲಿ ಕಾಡಾನೆ ಹಾವಳಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದರೆ ಈ ಹಾವಳಿಯನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಆರ್. ಎನ್. ನಾಯಕ್ (ಅರಣ್ಯ ಮಂತ್ರಿಗಳು).—

ಅ) ೧೯೮೬–೮೭ ರಿಂದ ೧೯೮೮–೮೯ರ ಇಲ್ಲಿಯವರೆವಿಗೆ ಒಟ್ಟು ನಾಲ್ಕು ಜನ ಆನೆ ತುಳಿತಕ್ಕೆ ಬಲಿಯಾಗಿದ್ದಾರೆ.

ಆ) ಮೇಲ್ಕಂಡ ಎಲ್ಲಾ ಪ್ರಕರಣಗಳಿಗೂ ಪರಿಹಾರವನ್ನು ಮಂಜೂರು ಮಾಡಲಾಗಿದೆ.

ಇ) ಬಂದಿದೆ.

ಈ) ಜನರನ್ನು ಒಟ್ಟುಗೂಡಿಸಿ ಆನೆಗಳನ್ನು ಕಾಡಿನತ್ತ ಓಡಿಸಲಾಗುವುದು. ಈ ಭಾಗಗಳಲ್ಲಿ ಆನೆ ದಾಟದಂತಹ ಕಂದರಗಳನ್ನು ತೋಡಿಸುವ ಕಾರ್ಯಕ್ರಮವನ್ನು ಯೋಜಿಸಿದೆ. ಅಗತ್ಯವಿದ್ದಲ್ಲಿ ಅವುಗಳನ್ನು ಬೇರೆ ಕಡೆಗೆ ಸ್ಥಳಾಂತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಬಿ. ಸ್ವಾಮಿರಾವ್.—ಸ್ವಾಮಿ, ಮಾನ್ಯ ಮಂತ್ರಿಗಳ ಉತ್ತರದಲ್ಲಿ ೪ ಜನ ಸತ್ತಿದ್ದಾರೆಂದು ಹೇಳಿದ್ದಾರೆ. ಈ ಉತ್ತರ ಅವರಿಗೆ ಯಾರು ಕೊಟ್ಟರೋ ಗೊತ್ತಾಗಲಿಲ್ಲ. ನಾನು ಆ ಕ್ಷೇತ್ರದಿಂದ ಬಂದ ವನು. ನಾನು ಪ್ರತಿನಿತ್ಯ ಅಲ್ಲಿನ ಸಮಸ್ಯೆಯನ್ನು ನೋಡುತ್ತಿರುವವನು. ಈ ಬಗ್ಗೆ ಅಲ್ಲಿ ಹೋರಾಟ ಕೂಡ ಮಾಡಿದ್ದೇವೆ. ಸುಮಾರು ೨–೩ ವರ್ಷಗಳಲ್ಲಿ ಅಲ್ಲಿ ೯ ಜನರು ಸತ್ತಿದ್ದಾರೆ. ಮತ್ತು ಅಲ್ಲಿ ಪ್ರತಿನಿತ್ಯ ಆನೆಗಳ ಕಾಟ ಜಾಸ್ತಿಯಾಗಿದೆ. ಮೊನ್ನೆ ಮೊನ್ನೆ ಕೂಡ ಅಲ್ಲಿ ಆನೆಗಳ ಕಾಟ ಜಾಸ್ತಿ ಯಾಗಿದೆ. ಅಲ್ಲಿ ಒಂದು ಹುಚ್ಚು ಆನೆ ಇದೆ. ಈ ಬಗ್ಗೆ ಹಲವಾರು ಸಾರಿ ನಾವು ಸರ್ಕಾರದ ಗಮನ ಸೆಳೆದರೂ ಇದುವರೆಗೂ ಏನೂ ಆಗಲಿಲ್ಲ. ರಸ್ತೆಯಲ್ಲಿ ಜನ ತಿರುಗಾಡಲು ಆಗುತ್ತಿಲ್ಲ. ಈ ಬಗ್ಗೆ ಏನು ಕಾರ್ಯಕ್ರಮ ಬೆಗೆದುಕೊಂಡಿದ್ದೀರಿ ಎಂದು ನಾವು ಕೇಳಿದಾಗ ಕಾರ್ಯಕ್ರಮ ಕೈಗೊಳ್ಳಲಾಗುವುದು, ಪರಿಶೀಲಿಸಲಾಗುವುದು, ನೋಡಲಾಗುವುದು, ಮಾಡಲಾಗುವುದು ಎಂದೇ ಹೇಳುತ್ತಿದ್ದಾರೆ.

ಶ್ರೀ ಆರ್. ಎನ್. ನಾಯಕ್. ಆನೆ ಹೆಸರು ಹೇಳುವುದಕ್ಕೂ ಅವರಿಗೆ ಭಯ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಮಂತ್ರಿಗಳು ಈ ರೀತಿ ಬೇಜವಾಬ್ದಾರಿ ಉತ್ತರ ಕೊಡದೆ ಜವಾಬ್ದಾರಿಯುತವಾದ ಉತ್ತರ ಕೊಡಬೇಕು.

ಶ್ರೀ ಬಿ. ರಾಚಯ್ಯ.—ಮೊದಲನೆಯದಾಗಿ, ಅರಣ್ಯ ಇಲಾಖೆಯ ಮುಖ್ಯಾಧಿಕಾರಿಗಳು ಕೊಟ್ಟಿರತಕ್ಕಂಥ ಉತ್ತರವನ್ನು ನಾನು ಹೇಳಿದ್ದೇನೆ. ಅಲ್ಲಿ ಆನೆಗಳ ಕಾಟ ಜಾಸ್ತಿ ಇದೆ ಎನ್ನುವುದನ್ನು ಸರ್ಕಾರ ಒಪ್ಪಿಕೊಂಡಿದೆ. ಇನ್ನು ಮಾನ್ಯ ಸದಸ್ಯರು ೯ ಜನ ಸತ್ತಿದ್ದಾರೆಂದು ಹೇಳಿದ್ದಾರೆ. ನನಗೆ ೪ ಜನ ಸತ್ತಿದ್ದಾರೆಂದು ವರದಿ ಬಂದಿದೆ. ಆ ಬಗ್ಗೆ ನಾನು ಪರಿಶೀಲನೆ ಮಾಡಿ ತಪ್ಪು ವರದಿ ಕೊಟ್ಟ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಬೇಜವಾಬ್ದಾರಿ ಉತ್ತರ ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ನಾನು ಜವಾಬ್ದಾರಿಯುತವಾದ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರ ಭಾವನೆ ಆ ರೀತಿ ಇದ್ದರೆ ಅದನ್ನು ತೆಗೆದುಹಾಕಬೇಕು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಕಳೆದ ಸಾರಿ ಇದೇ ವಿಧಾನಸಭೆಯಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಕಾಡಾನೆಗಳಿಂದ ಜನರಿಗೆ ತೊಂದರೆಯಾಗುವುದನ್ನು ತಪ್ಪಿಸಲಿಕ್ಕೆ ಟ್ರಂಚ್‌ಗಳನ್ನು ಹೊಡೆಸುತ್ತೇವೆಂದು ಹೇಳಿದ್ದರು. ಟ್ರಂಚ್‌ಗಳನ್ನು ಹೊಡೆಯದೆ ಇದ್ದರೂ ಟ್ರಂಚ್ ಹೊಡೆದಿದೆ ಎಂದು ಬಿಲ್‌ಗಳನ್ನು ಕಳುಹಿಸಿರಬೇಕೆಂದು ಕಾಣುತ್ತದೆ ಆದರ ಬಗ್ಗೆ ತನಿಖೆ ಮಾಡಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸರ್ಕಾರವೇ ಎಲ್ಲರ ಭೂಮಿಯಲ್ಲೂ ಟ್ರಂಚ್‌ಗಳನ್ನು ಹೊಡೆಯುವುದ ಕ್ಕಾಗುವುದಿಲ್ಲ. ಟ್ರಂಚ್‌ಗಳನ್ನು ಹೊಡೆದಿರುವ ಬಗ್ಗೆ ಲೋಪದೋಷಗಳೇನಾದರೂ ಆಗಿದ್ದರೆ ಅದನ್ನು ಸರಿಪಡಿಸುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಟ್ರಂಚ್‌ಗಳನ್ನು ಹೊಡೆಯುವುದಕ್ಕೆ ಸರ್ಕಾರದ ಜೊತೆಗೆ ರೈತರುಗಳು ಮತ್ತು ಊರಿನ ಜನರುಗಳು ಸಹಕರಿಸಬೇಕು. ಕಾಡು ಮೃಗಗಳಿಂದ ಜನರಿಗೆ ರಕ್ಷಣೆ ಕೊಡುವುದಕ್ಕೆ ಕಾಡಿನ ಸುತ್ತಲೂ ಎಲೆಕ್ಟ್ರಿಕ್ ವೈರ್‌ಗಳನ್ನು ಬಿಡುತ್ತೇವೆ ಎಂದಾಗ, ನಮ್ಮ ದನಕರುಗಳು ಕಾಡಿನ ಹತ್ತಿರ ಹೋಗುವುದರಿಂದ ಬಹಳ ತೊಂದರೆ ಯಾಗುತ್ತದೆ, ಆದ್ದರಿಂದ, ಎಲೆಕ್ಟ್ರಿಕ್ ವೈರ್‌ಗಳನ್ನು ಬಿಡಬಾರದೆಂದು ಜನಗಳಿಂದ ಒತ್ತಾಯ ಬಂತು. ಆನೆಗಳ ಮತ್ತು ಕಾಡು ಮೃಗಗಳಿಂದ ಆಗುವ ಹಾನಿಯನ್ನು ತಡೆಗಟ್ಟುವ ಕೆಲಸದಲ್ಲಿ ಸರ್ಕಾರದ ಅಧಿಕಾರಿ ಗಳೊಂದಿಗೆ ಜನರೂ ಸಹಾಯ, ಸಹಕಾರ ನೀಡಬೇಕು. ಆ ಮೇಲೆ ಒಂದು ಹುಚ್ಚು ಆನೆಯು ಜನಗಳಿಗೆ ಬಹಳ ತೊಂದರೆ ಕೊಡುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಬಹುಶಃ ನಾನು ಕಳೆದ ಸಾರಿ ಅಲ್ಲಿಗೆ ಹೋಗಿದ್ದಾಗ ಆ ಆನೆಯನ್ನು ಹೊಡೆದುಹಾಕಿದ್ದಾರೆ. ಇಪ್ಪತ್ತಿನ ದಿವಸಗಳಲ್ಲಿ ಆನೆಗಳ ಗಲಾಟೆ ಜಾಸ್ತಿಯಾಗುತ್ತಿದೆಯೆಂದು ಅವುಗಳನ್ನು ಕೊಲ್ಲುವುದಕ್ಕೆ ಶುರು ಮಾಡಿದ ಮೇಲೆ ಅವುಗಳ ಸಂಖ್ಯೆ ಕೂಡ ಕಡಿಮೆಯಾಗುತ್ತಿವೆ. ಇದನ್ನು ಮಾನ್ಯ ಸದಸ್ಯರೂ ಸಹ ಗಮನಿಸಬೇಕು. ಕಾಡಿನಲ್ಲಿ ಯಾರು ಸ್ವೇಚ್ಛೆಯಾಗಿ ತಿರುಗಾಡುತ್ತಿದ್ದರೋ ಅಂಥವರುಗಳಲ್ಲಿ ಒಬ್ಬಿಬ್ಬರನ್ನು ಆನೆಗಳು ಕೊಂದಿರುವುದು ಉಂಟು.

ಶ್ರೀ ಬಿ. ಸ್ವಾಮಿರಾವ್—ಆನೆಗಳನ್ನು ಓಡಿಸುವುದಕ್ಕೆ ಹೋಗುವ ಜನಗಳನ್ನೇ ಆನೆಗಳು ಓಡಿಸಿಕೊಂಡು ಹೋಗುತ್ತವೆ. ಬೇರೆ ಬೇರೆ ಕಾರಣಗಳಿಗೋಸ್ಕರ ಜನರು ಕಾಡಿಗೆ ಹೋಗಿರುವಾಗ ಆನೆಗಳು ಅವರನ್ನು ಕೊಂದಿರಬಹುದೆಂದು ತಾವು ಹೇಳಿದ್ದೀರಿ. ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳಲ್ಲೇ ಕೆಲವರು ಬೇರೆಯವರೊಡನೆ ಶಾಮೀಲಾಗಿ ಅರಣ್ಯವನ್ನು ಲೂಟಿ ಮಾಡುತ್ತಿದ್ದಾರೆ. ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ನಾನು ಕಳೆದ ಸಾರಿಯೇ ಉತ್ತರ ಕೊಟ್ಟಿದ್ದೇನೆ. ಅಧಿಕಾರಿಗಳು ಬೇರೆಯವರೊಡನೆ ಶಾಮೀಲಾಗಿ ಕಾಡಿನ ಸ್ವತ್ತನ್ನು ಅಪಹರಿಸುತ್ತಿರುವ ಮಾಹಿತಿ ಸಿಕ್ಕಿದರೆ ಅವರುಗಳ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಸರ್ಕಾರದ ಕ್ಯಾಬಿನೆಟ್‌ನಲ್ಲಿರತಕ್ಕಂಥವರು, ಕಾಡಿನ ಪ್ರಾಣಿಗಳನ್ನು ವಧೆ ಮಾಡಿದ್ದವರು, ಅಥವಾ ಶಿಕಾರಿ ಮಾಡಿದ್ದವರು ಇದ್ದರೆ ಅಂಥವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಅವರಿಂದ ರಾಜೀನಾಮೆ ಕೊಡಿಸುತ್ತೀರಾ? ಅಥವಾ ಸರ್ಕಾರವೇ ರಾಜೀನಾಮೆ ಕೊಡುತ್ತದೆಯೋ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸ್ವಾಮಿರಾಯರು ಆಗಾಗ ರಾಜೀನಾಮೆ ಕೇಳತ್ತಾನೇ ಇರುತ್ತಾರೆ. ನಮ್ಮ ಮಂತ್ರಿಮಂಡಲದಲ್ಲಿ ಅರಣ್ಯ ಪ್ರಾಣಿಗಳನ್ನು ಶಿಕಾರಿ ಮಾಡಿದ್ದವರು ಸೇರಿಕೊಂಡಿದ್ದಾರೆಂದು ಹೇಳಿದ್ದಾರೆ. ಬಹುಶಃ ಆ ವಿಷಯ ನನ್ನ ಗಮನಕ್ಕೆ ಇನ್ನೂ ಬಂದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮ್ಮ ಜನರಿಗೆ ಆ ವಿಷಯವನ್ನು ತಂದರೆ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡಿರುವವರನ್ನೂ ನೀವು ಶಿಕಾರಿ ಮಾಡುತ್ತೀರಾ ಎಂದು ಕೇಳುತ್ತೇವೆ.

ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಇಂಜನೀಯರಿಂಗ್ ಕಾಲೇಜುಗಳು

೪೪೦ ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ ಶಹರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಇಂಜಿನೀಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು (ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳ ಪ್ರತ್ಯೇಕ ವಿವರ ನೀಡುವುದು)?

ಆ) ಯಾವ ಯಾವ ವಿಷಯಗಳ ವಿಭಾಗ (ಡಿಪಾರ್ಟ್‌ಮೆಂಟ್) ಇರುವುವು ಹಾಗೂ ಪ್ರತಿಯೊಂದು ಕಾಲೇಜಿನ ಎಲ್ಲ ವಿಭಾಗಗಳಲ್ಲಿ ಖಾಯಂ ವಿಷಯ ಪರಿಣಿತರು ಇರುವರೇ? (ವಿವರ ನೀಡುವುದು)

ಇ) ಪ್ರತಿಯೊಂದು ಕಾಲೇಜುಗಳಲ್ಲಿ ಎಲ್ಲ ವಿಷಯಗಳ ಸುಸಜ್ಜಿತವಾದ ಪ್ರಯೋಗಾಲಯಗಳು ಇವೆಯೆ? (ವಿವರ ನೀಡುವುದು)

ಈ) ಖಾಯಂ ವಿಷಯ ಪರಿಣಿತರು, ಪ್ರಯೋಗಾಲಯಗಳು ಹಾಗೂ ಸುಸಜ್ಜಿತವಾದ ಗ್ರಂಥಾಲಯಗಳನ್ನು ಹೊಂದದೆ ಇರುವ ಕಾಲೇಜುಗಳ ಪ್ರತ್ಯೇಕ ವಿವರ ನೀಡುವುದು?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ಶಿಕ್ಷಣ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು ೫೦ ಇಂಜಿನೀಯರಿಂಗ್ ಕಾಲೇಜುಗಳಿಗೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

೧)	ಸರ್ಕಾರಿ ಕಾಲೇಜು	— ೨
೨)	ವಿಶ್ವವಿದ್ಯಾನಿಲಯ	— ೨
೩)	ರೀಜನಲ್ ಕಾಲೇಜು	— ೧
೪)	ಅನುದಾನಿತ ಕಾಲೇಜು	— ೧೧
೫)	ಖಾಸಗಿ ಅನುದಾನ ರಹಿತ ಕಾಲೇಜುಗಳು	— ೩೪
	ಒಟ್ಟು	೫೦